March 2019 | Reg. No. ................................... | **FY 06**

Name ........................................

## Part - II

## KANNADA

Maximum : 80 Scores

Time : **2½** Hours

Cool off time : **15** Minutes

***General Instructions to Candidates :***

- There is a 'Cool off time' of 15 minutes in addition to the writing time.
- Use the 'Cool off time' to get familiar with questions and to plan your answers.
- Read the instructions carefully.
- Read the questions carefully before answering.
- Calculations, figures and graphs should be shown in the answer sheet itself.
- Give equations wherever necessary.
- Electronic devices except nonprogrammable calculators are not allowed in the Examination Hall.

**1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆಯ್ದು ಬರೆಯಿರಿ.** **(4 × 1 = 4)**

**1.** ಆಯ್ದಕ್ಕಿ ಲಕ್ಕಮ್ಮಳ ವಚನಗಳ ಅಂಕಿತನಾಮ ಯಾವುದು?

(ಕೂಡಲಸಂಗಮದೇವ, ಮಾರಯ್ಯಪ್ರಿಯ ಅಮಲೇಶ್ವರ ಲಿಂಗ, ಚೆನ್ನಮಲ್ಲಿಕಾರ್ಜುನ, ಗುಹೇಶ್ವರ)

**2.** ‘‘ಅಮ್ಮಾ, ಈ ಹೊತ್ತು ಉಣ್ಣಾಕ ಏನ್ ಮಾಡ್ರಿ ?’’ –ಈ ಮಾತನ್ನು ಹೇಳಿದ ಕಥಾಪಾತ್ರ ಯಾವುದು?

(ಕೊಟ್ರ,ತಿಮ್ಮಿ,ಬಸವ,ಚಂದ್ರ)

**3.** ಅರಿಯದು ಅಳವು ತಿಳಿಯದು ಮನವು

ಕಾಣದೋ ಬಣ್ಣಾ

ಶಾಂತಿರಸವೇ ಪ್ರೀತಿಯಿಂದಾ

ಮೈದೋರಿತಣ್ಣಾ –

ಇದು ಯಾವ ಕವಿತೆಯ ಸಾಲಾಗಿದೆ?

(ಸುಗ್ಗಿ ಬರುತಿದೆ, ಸುನಾಮಿಯ ಹಾಡು, ಬ್ಲೆನ್‌ಹೀಮ್ ಕದನ, ಬೆಳಗು)

4. ಕಡಲ ಒಡಲು ಎಂಬ ಪಾಠಭಾಗವು ಸಾಹಿತ್ಯದ ಯಾವ ಪ್ರಕಾರಕ್ಕೆ ಉದಾಹರಣೆಯಾಗಿದೆ?
(ಸಣ್ಣಕಥೆ, ಕಾದಂಬರಿ, ಪ್ರವಾಸ ಕಥನ, ಪ್ರಬಂಧ)

**5 ರಿಂದ 10 ರವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ :** **(6 × 1 = 6)**

5. 'ಬೇಟೆಗಾರ ಬೇಟೆಗಾಗಿ ಕಾಡಿಗೆ ತೆರಳಿದನು'. ಈ ವಾಕ್ಯದಲ್ಲಿ ಬಂದಿರುವ ತದ್ಧಿತ ಪ್ರತ್ಯಯವನ್ನು ಗುರುತಿಸಿ ಬರೆಯಿರಿ.

6. ಸ್ವರ್ಗ, ದೃಷ್ಟಿ – ಇವುಗಳ ತದ್ಭವ ರೂಪವನ್ನು ಬರೆಯಿರಿ.

7. ಎಲ್ಲರೊಳಗೊಂದಾಗು – ಈ ಪದವನ್ನು ವಿಂಗಡಿಸಿ ಬರೆಯಿರಿ.

8. 'ರಾಜಗೀಜ' – ಇದೊಂದು ಪ್ರತಿಧ್ವನಿ ಪದ. ಇಂತಹ ಪದಗಳಿಗೆ ಎರಡು ಉದಾಹರಣೆ ನೀಡಿರಿ.

9. ಶಿಕ್ಷಣ, ವಿಜ್ಞಾನ – ಈ ಪದಗಳ ಭಾವನಾಮವನ್ನು ಬರೆಯಿರಿ.

10. ದೇಶಕ್ಕಾಗಿ <u>ಅಳಿಲಸೇವೆ</u>ಗೈಯಲು ಅವಕಾಶ ದೊರೆತುದು ನನ್ನ ಭಾಗ್ಯವೇ ಸರಿ. – ಈ ವಾಕ್ಯದಲ್ಲಿ ಅಡಿಗೆರೆ ಎಳೆದ ನುಡಿಗಟ್ಟನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.

11. ಕೆಳಗೆ ನೀಡಲಾದ ವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.
ತುಳುನಾಡಿನ ವಿಶಿಷ್ಟ ಕಲೆಯಾದ ಭೂತಾರಾಧನೆ ಸಾಮೂಹಿಕ ಪಾಲ್ಗೊಳ್ಳುವಿಕೆಯ ಆರಾಧನಾ ಕಲೆ ಎಂದು ಪರಿಗಣಿಸಲ್ಪಟ್ಟಿದೆ. **(2)**

12. ಈ ಕೆಳಗಿನ ಗ್ರಾಮ್ಯ ಭಾಷಾ ಪ್ರಯೋಗವನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿ ಬರೆಯಿರಿ.
ಇದೊಂದ್ ಸಲ ದೊಡ್ಡ ಮನಸ್ಸು ಮಾಡಬೇಕು. ಒಬ್ಬ ಆಳನ್ನು ಹುಡುಕ್ತಾ ಇದೀನಿ. ಸಿಕ್ತಾ ಇಲ್ಲ. ಆದೇನ್ ಬೆಲೆ ಆಗ್ಬಿಟ್ಟಿದೇಂತೀರಿ ಈಗ. **(3)**

13. ಕೆಳಗೆ ನೀಡಿರುವ ಕವಿತೆಯ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.
ಗಿಡಗಂಟೆಗಳಾ ಕೊರಳೊಳಗಿಂದ
ಹಕ್ಕಿಗಳ ಹಾಡು
ಹೊರಟಿತು ಹಕ್ಕಿಗಳ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು ಕಾಡಿನಾ ನಾಡು **(3)**

**14 ರಿಂದ 18 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕನ್ನು ಉತ್ತರಿಸಿರಿ.** **(4 × 4 = 16)**

**14.** ನೀವು ಸಂದರ್ಶಿಸಿದ ಯಾವುದಾದರೂ ಒಂದು ಪ್ರೇಕ್ಷಣೀಯ ಸ್ಥಳದ ಕುರಿತು ಮಾಹಿತಿ ಟಿಪ್ಪಣಿಯನ್ನು ತಯಾರಿಸಿರಿ.

**15.** 'ಬಕ' ನಾಟಕದಲ್ಲಿ ಬಂದಿರುವ ಈ ಕೆಳಗಿನ ಮಾತುಗಳ ಸಂದರ್ಭವನ್ನು ತಿಳಿಸಿರಿ.

ಅ) ಮನುಷ್ಯರು ಬುದ್ಧಿವಂತರಾಗ್ತಿರೋ ಲಕ್ಷಣ ಕಾಣಿಸ್ತಿದೆ.

ಆ) ಈ ಒಪ್ಪಂದಾನೇ ಇನ್ಮೇಲೆ ಸಂವಿಧಾನ.

**16.** ಕೆಳಗೆ ನೀಡಲಾದ ಸಾಲುಗಳ ಭಾವಾರ್ಥವನ್ನು ಬರೆಯಿರಿ.

ಉಪ್ಪಿಷ್ಟು ಹುಳಿಯಿಷ್ಟು ಖಾರ ಸಿಹಿಯಷ್ಟಿಷ್ಟು
ಒಪ್ಪಿರ್ದೊಡದು ಭೋಜ್ಯವಂತು ಜೀವಿತಮುಂ
ತಪ್ಪು ಸರಿ ಬೆಪ್ಪು ಜಾಣಂದಕುಂದುಗಳ ಬಗೆ
ಯಿಪ್ಪತ್ತು ಸೆರೆ ರುಚಿ ಮಂಕುತಿಮ್ಮ

**17.** ಅತಿವೃಷ್ಟಿಯಿಂದ ಉಂಟಾದ ನೆರೆಯ ಬಳಿಕ ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಿರುವುದನ್ನು ನಾವು ತಿಳಿದಿದ್ದೇವೆ. ಈ ಕುರಿತು ಜನಜಾಗೃತಿ ಮೂಡಿಸಲು ಅಗತ್ಯವಾದ ಕರಪತ್ರವನ್ನು ತಯಾರಿಸಿರಿ.

**18.** 'ಕೋಪದಿಂದ ವ್ಯಕ್ತಿ ತನ್ನ ಹಾಗೂ ಇತರರ ನಾಶಕ್ಕೆ ಕಾರಣನಾಗುತ್ತಾನೆ' ಎಂಬುದನ್ನು ಬಸವಣ್ಣನವರ ವಚನದ ಆಧಾರದಲ್ಲಿ ಸ್ಪಷ್ಟಪಡಿಸಿರಿ.

**19 ರಿಂದ 26 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರನ್ನು ಉತ್ತರಿಸಿರಿ.** **(6 × 5 = 30)**

**19.** ಸುಗ್ಗಿಯನ್ನು ಸ್ವಾಗತಿಸಲು ಪ್ರಕೃತಿ ಸಿದ್ಧಗೊಂಡ ಬಗೆ 'ಸುಗ್ಗಿ ಬರುತಿದೆ' ಕವನದಲ್ಲಿ ವರ್ಣಿತವಾದುದನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

**20.** 'ಬ್ಲೆನ್‌ಹೀಮ್ ಕದನ' ಕವಿತೆಯಲ್ಲಿ ಅಜ್ಜನು ಮೊಮ್ಮಕ್ಕಳಿಗೆ ಹೇಳಿದ ಭೀಕರ ಯುದ್ಧದ ಕಥೆಯನ್ನು ಸಂಗ್ರಹವಾಗಿ ಬರೆಯಿರಿ.

**21.** 'ಪ್ರತಿನಾಯಕ ಪಾತ್ರಗಳು ಯಾವುದೇ ಆಗಿರಲಿ, ಶೇಣಿಯವರ ಕೈಯಲ್ಲಿ ಹೊಸ ಜೀವಂತಿಕೆಯನ್ನು ಪಡೆಯುತ್ತಿದ್ದವು'. ನೀವು ಓದಿದ ಪಾಠಭಾಗದ ಹಿನ್ನಲೆಯಲ್ಲಿ ಈ ಮಾತನ್ನು ಸಮರ್ಥಿಸಿರಿ.

**22.** 'ಇದ್ಯ ಬಲ್ಲವಗೆ ಭಯವುಂಟೆ' – ಪಾಠಭಾಗದಲ್ಲಿ ಬಂದಿರುವ ಬೇಸಾಯಕ್ಕೆ ಸಂಬಂಧಿಸಿದ ತ್ರಿಪದಿಗಳನ್ನು ಆಧಾರವಾಗಿರಿಸಿ 'ಜನಪದರಲ್ಲಿ ಬೇಸಾಯ' ಎಂಬ ವಿಷಯದ ಕುರಿತು ಕಿರು ಲೇಖನವೊಂದನ್ನು ತಯಾರಿಸಿರಿ.

**23.** 'ಕಳ್ಳನಿಗೆ ಸುಳ್ಳೇ ಬಲವು' ಎಂಬ ಮಾತು 'ವಟವೃಕ್ಷವೇ ಸಾಕ್ಷಿ' ಕಥೆಯ ದುಷ್ಟಬುದ್ಧಿಯ ಸ್ವಭಾವಕ್ಕೆ ಎಷ್ಟರ ಮಟ್ಟಿಗೆ ಸಮಂಜಸವೆನಿಸುತ್ತದೆ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.

**24.** ಜಲಮೂಲದ ಸಂರಕ್ಷಣೆಗಾಗಿ ತನ್ನ ಜೀವನವನ್ನೇ ಮುಡಿಪಾಗಿರಿಸಿದ ಖಾದ್ರಿಕಾಕನ ಆದರ್ಶ ವ್ಯಕ್ತಿತ್ವ 'ಒಸರು' ಕಥೆಯಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿರಿ.

**25.** ಕವಿ ಕುವೆಂಪು ಅವರ 'ನೇಗಿಲ ಯೋಗಿ' ಕವನದ ಸಾಲುಗಳನ್ನು ಕೆಳಗೆ ನೀಡಲಾಗಿದೆ. ಇದರ ಆಸ್ವಾದನ ಟಿಪ್ಪಣಿಯನ್ನು ತಯಾರಿಸಿರಿ.

ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ
ಫಲವನು ಬಯಸದ ಸೇವೆಯೆ ಪೂಜೆಯು
ಕರ್ಮವೆ ಇಹಪರ ಸಾಧನವು
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿನಿಯಮದೊಳಗವನೇ ಭೋಗಿ

ಲೋಕದೊಳೇನೆ ನಡೆಯುತಲಿರಲಿ
ತನ್ನೀ ಕಾರ್ಯವ ಬಿಡನೆಂದೂ
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ
ಹಾರಲಿ ಗದ್ದುಗೆ ಮಕುಟಗಳು
ಮುತ್ತಿಗೆ ಹಾಕಲಿ ಸೈನಿಕರೆಲ್ಲ
ಬಿತ್ತುಳುವುದನವ ಬಿಡುವುದೆ ಇಲ್ಲ.

**26.** ಸುನಾಮಿ ಉಂಟುಮಾಡಿದ ಭೀಕರ ನಾಶನಷ್ಟಗಳ ಕುರಿತು 'ಸುನಾಮಿಯ ಹಾಡು' ಕವನವನ್ನು ಓದಿ ತಿಳಿದಿರುವಿರಿ. ಇದರಿಂದ ನಾವು ಕಲಿಯಬಹುದಾದ ಪಾಠವೇನು?

**27 ರಿಂದ 29 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡನ್ನು ಒಂದೂವರೆ ಪುಟಕ್ಕೆ ಮೀರದಂತೆ ಉತ್ತರಿಸಿರಿ.**
**(2 × 8 = 16)**

**27.** ಕುಂ. ವೀರಭದ್ರಪ್ಪನವರ 'ಹುಗ್ಗಿ' ಕಥೆಯಲ್ಲಿ ಬಡತನ ಮತ್ತು ಬಾಲಕಾರ್ಮಿಕತನದ ಕರಾಳ ರೂಪ ಪ್ರತಿಬಿಂಬಿತವಾದ ಬಗೆಯನ್ನು ಲೇಖನದ ರೂಪದಲ್ಲಿ ಬರೆಯಿರಿ.

**28.** ಅಭಯರುಚಿ ಮತ್ತು ಅಭಯಮತಿಯರ ಧೀರೋದಾತ್ತತೆಯನ್ನು ಕಂಡ ರಾಜ ಮಾರಿದತ್ತನು 'ಧೀರರಕಟ ಕುಮಾರರ್' ಎಂಬ ಉದ್ಗಾರವನ್ನೆತ್ತುತ್ತಾನೆ. ಮಕ್ಕಳಿಬ್ಬರ ದೃಢ ಮನಸ್ಸು ಮತ್ತು ಪಕ್ವತೆಯು 'ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಕಾವ್ಯ ಭಾಗದಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿರಿ.

**29.** ''ನಿನ್ನಯ ವೀರರೈವರ ನೋಯಿಸೆನು'' ಕಾವ್ಯಭಾಗದಲ್ಲಿ ಬಂದಿರುವ ಕೃಷ್ಣನ ಭೇದೋಪಾಯ ತಂತ್ರ ಮತ್ತು ಕರ್ಣನ ಸ್ವಾಮಿನಿಷ್ಠೆಯ ಕುರಿತು ವಿಮರ್ಶಾತ್ಮಕ ಲೇಖನವನ್ನು ತಯಾರಿಸಿರಿ.